ರಾಜ ಕಾಲುವೆಗಳು

36 (253) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ):– (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹಲವಾರು ರಾಜಕಾಲುವೆಗಳನ್ನು ಒತ್ತುವರಿ ಮಾಡಿರುವುದರಿಂದ ಹಾಗೂ ಹೂಳು ತುಂಬಿ ನೀರು ಕೆರೆಗಳಿಗೆ ಹೋಗುವ ಸಂಪರ್ಕ ಕಳೆದು ಕೊಂಡಿರುವುದರಿಂದ ಕೆರೆಗಳಿಗೆ ನೀರು ಬರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದೊಡ್ಡಬಳ್ಳಾಪುರ ತಾಲ್ಲೂಕಿನ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

ಅ) ಬಂದಿದೆ

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ 39 ಕೆರೆಗಳಿದ್ದು, ಪ್ರಸಕ್ತ ಸಾಲಿನಲ್ಲಿ 9 ಕೆರೆಗಳನ್ನು ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗಿದೆ.

ಹನೂರು ಜಲಾಶಯದಲ್ಲಿ ಕಾಮಗಾರಿ

37 (71) ಶ್ರೀ ನರೇಂದ್ರ ಆರ್. (ಹನೂರು):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹನೂರು ಬಳಿಯಿರುವ ಗುಂಡ್ಯಾಲ್ ಡ್ಯಾಮ್ ನೀರು ಹರಿಯುವ ಮುಖ್ಯ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದು ಹಾಗೂ ಮುಳ್ಳಿ ತೂಬು ಮತ್ತು ಗೇಟುಗಳ ದುರಸ್ತಿ ಕಾರ್ಯ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇವುಗಳನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಹನೂರು ಮತಕ್ಷೇತ್ರದ ಅಜ್ಜೀಪುರ ಬಳಿಯಿರುವ ಉಡುತೊರೆ ಜಲಾಶಯದ ಕಾಮಗಾರಿ ಮುಗಿದಿದ್ದು, ಅದರ ಮುಖ್ಯ ಕಾಲುವೆ ಹಾಗು ತೋಳು ಕಾಲುವೆಗಳು ಹಾಗೂ ಅದಕ್ಕೆ ಅಳವಡಿಸಿರುವ ಗೇಟುಗಳು ಇನ್ನೂ ನಿರ್ಮಾಣ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಆ ಕೆಲಸವನ್ನು ಎಂದು ಕೈಗೆತ್ತಿಕೊಳ್ಳಲಾಗುವುದು;